ಮುದ್ದೇಬಿಹಾಳಕ್ಕೆ ಕುಡಿಯುವ ನೀರಿನ ವ್ಯವಸ್ಥೆಯ ಬಗ್ಗೆ

೪೪೯ (೧೬೬೭) ಶ್ರೀಯುತರಾಗಳಾದ ಪಿ. ಎಸ್. ನಾಡಗೌಡ ಅಪ್ಪಾಜಿ (ಮುದ್ದೇಬೀಹಾಳ), ಮನೋಹರ ಐನಾಪುರ (ಬಳ್ಳಾರಿ), ಎ.ಟಿ. ರಾಮಸ್ವಾಮಿ (ಅರಕಲಗೂಡು) ಮತ್ತು ಎ. ಎಂ. ಹಿಂಡಸಗೇರಿ (ಹುಬ್ಬಳ್ಳಿ).—ಮಾನ್ಯ ಬಂದರು, ಮೀನುಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ :

ಅ) ಮುದ್ದೇಬಿಹಾಳಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಸ್ಥಗಿತಗೊಂಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಕಳೆದ ಮೇ ೫೫ ರಿಂದ ಕುಡಿಯುವ ಯೋಜನೆಯ ಕಟ್ಟಡದ ಕೆಲಸ ಸ್ಥಗಿತಗೊಂಡಿದ್ದು ಹಾಗೂ ಹೆಚ್ಚಿನ ಹಾನಿ ಉಂಟಾಗುವ ಸಂಭವಗಳು ಇರುವುದು ನಿಜವೆ ?

ಇ) ಹಾಗಿದ್ದರೆ ಕೈಗೊಂಡ ಕ್ರಮಗಳೇನು ?

ಶ್ರೀ ಟಿ. ಎನ್. ನರಸಿಂಹಮೂರ್ತಿ (ಬಂದರು, ಮೀನುಗಾರಿಕೆ, ವಸತಿ ಮತ್ತು ನಗರಾಭಿವೃದ್ಧಿ ಸಚಿವರು).—

ಅ) ಇಲ್ಲ, ಪಟ್ಟಣಕ್ಕೆ ಹಾಲಿ ನೀರು ಸರಬರಾಜು ಸ್ಥಗಿತಗೊಂಡಿಲ್ಲ.

ಆ) ಕಟ್ಟಡದ ಕೆಲಸ ತಾಂತ್ರಿಕ ಕಾರಣದಿಂದಾಗಿ ಸ್ವಲ್ಪ ಕಾಲದವರೆಗೆ ಸ್ಥಗಿತಗೊಂಡಿದ್ದರೂ ಈ ಕಾಮಗಾರಿಗೆ ಹಾನಿಯುಂಟಾಗುವ ಸಾಧ್ಯತೆ ಇರುವುದಿಲ್ಲ.

ಇ) ಮೇಲಿನ ಪ್ರಶ್ನೆ (ಅ)ನಲ್ಲಿ ಉತ್ತರಿಸಿರುವಂತೆ ತಾಂತ್ರಿಕ ಸಮಸ್ಯೆಗಳು ಬಗೆಹರಿದಿದ್ದು, ಗುತ್ತಿಗೆದಾರರಿಗೆ ಕೆಲಸವನ್ನು ಪ್ರಾರಂಭಿಸಲು ಒತ್ತಾಯ ತರಲಾಗಿದೆ ಇಷ್ಟಲ್ಲದೆ ಸರ್ಕಾರದಿಂದ ಒದಗಿಸಿರುವ ರೂ. ೧.೦೦ ಲಕ್ಷ ಹಣದಲ್ಲಿ ೫ ಕೊಳವೆ ಬಾವಿಗಳನ್ನು ಕೊರೆದಿದ್ದು ಅವುಗಳಿಗೆ ಕೈ ಪಂಪುಗಳನ್ನು ಅಳವಡಿಸಲಾಗುತ್ತಿದೆ.

ಶ್ರೀ ಪಿ. ಎಸ್. ನಾಡಗೌಡ ಅಪ್ಪಾಜಿ.—ಮಾನ್ಯ ಅಧ್ಯಕ್ಷರೇ, ನಾನು ಮುದ್ದೇಬಿಹಾಳದ ಕುಡಿಯುವ ನೀರಿನ ಯೋಜನೆಯ ಬಗ್ಗೆ ಒಂದು ಗಮನ ಸೆಳೆಯುವ ಸೂಚನೆಯನ್ನು ಕಳುಹಿಸಿ ಕೊಟ್ಟಿದ್ದೆ. ಆದರೆ ಅದನ್ನು ಪರಿವರ್ತಿಸಿ ಸ್ಟಾರ್ಡ್ ಕ್ವಶ್ಚನ್ ಆಗಿ ಮಾಡಿದ್ದಾರೆ. ನಾನು ಕೇಳುವುದೇನೆಂದರೆ, ಸುಮಾರು ೬ ವರ್ಷಗಳಿಂದ ಅಲ್ಲಿ ಕುಡಿಯುವ ನೀರಿನ ತೊಂದರೆ ಇದೆ, ೧೯೮೪ರಲ್ಲಿಯೇ ಈ ಯೋಜನೆಯನ್ನು ಶುರು ಮಾಡಿದ್ದಾರೆ, ಇಲ್ಲಿಯವರೆಗೂ ಮಾಡಿ ಮುಗಿಸಿಲ್ಲ, ವಿವಿಧ ಹಂತದಲ್ಲಿ ಎಲ್ಲಾ ಕೆಲಸವೂ ಈ ಕ್ಷಣಕ್ಕೆ ಸ್ಥಗಿತಗೊಂಡಿದೆ. ಆದಕ್ಕಾಗಿ ನಾನು ಮಾನ್ಯ ಸಚಿವರನ್ನು ಕೂಡ ಭೇಟಿಯಾಗಿದ್ದೆ. ಆದರೆ ಯಾವುದೇ ಕ್ರಮಗಳನ್ನು ತೆಗೆದುಕೊಂಡಿಲ್ಲ. ನಾನು ವಾಟರ್‌ಸಪ್ಲೈ ಸ್ಕೀಮ್ ಬಗ್ಗೆ ಕೇಳಿದ್ದೇನೆ. ಆದರೆ ಉತ್ತರದಲ್ಲಿ ಆರೆಂಜ್‌ಮೆಂಟ್ಸ್ ಅಂತ ಕೊಟ್ಟಿದ್ದಾರೆ. ಸ್ಕೀಮ್ ಬಗ್ಗೆ ನಾನು ಕೇಳಿದರೆ, ಆದಷ್ಟು ಬೇಗ ಬೋರ್‌ವೆಲ್‌ಗಳಿಗೆ ಕೈಪಂಪುಗಳನ್ನು ಅಳವಡಿಸಲಾಗುವುದು ಎಂದು ಉತ್ತರಿಸಿದ್ದಾರೆ. ನಾನು ತಮ್ಮನ್ನು ಕೇಳುವುದು ಇಷ್ಟೆ. ಅತೀ ಮಹತ್ವವಾದಂಥ ಒಂದು ಐತಿಹಾಸಿಕ ಘಟನೆಯು ಆ ಊರಿನಲ್ಲಿ ನಡೆಯಿತು. ಅಲ್ಲಿಯ ಮುನ್ಸಿಪಾಲಿಟಿಯ ಮೆಂಬರ್ಸ್, ಅದೂ ಸಹ ವಿರೋಧೀ ಪಕ್ಷದ ಎಲ್ಲಾ ಮೆಂಬರ್ಸ್, ೧೯೮೮ರಲ್ಲಿ ಅಲ್ಲಿ ನೀರು ಸರಬರಾಜು ವ್ಯವಸ್ಥೆಯನ್ನು ಮಾಡುವಲ್ಲಿ ಸರಕಾರದವರು ವಿಫಲರಾದಾಗ ರಾಜೀನಾಮೆ ಕೊಟ್ಟರು ಮತ್ತು ಸತ್ಯಾಗ್ರಹ ಮಾಡಿದರು. ಆಗ ಲಾಠಿ ಚಾರ್ಜ್ ಆಯಿತು ಸಾಕಷ್ಟು ಗಲಾಟೆ ನಡೆಯಿತು, ಇಂಥ ಪ್ರಮುಖ ವಿಚಾರದ ಬಗ್ಗೆ ತಾವುಗಳು ಉತ್ತರದಲ್ಲಿ ಸೂಕ್ತ ಮಾಹಿತಿ ಒದಗಿಸದೇ ಇರುವುದನ್ನು ನೋಡಿದರೆ ಬಹುತೇಕ ಅದೇ ಗಲಾಟೆ ಆಲ್ಲಿ ಪುನರಾವರ್ತನೆಯಾಗಬಹುದೇನೋ ಎಂಬ ಸಂಶಯವು ನನಗೆ ಬರುತ್ತಿದೆ. ಆದ್ದರಿಂದ ದಯವಾಡಿ ಮಾನ್ಯ ಸಚಿವರು ಇದರ ಬಗ್ಗೆ ಸ್ಪಷ್ಟೀಕರಣ ನೀಡಬೇಕು. ಏಕೆಂದರೆ technicality does not come here. ಆದ್ದರಿಂದ..... ...

MR. SPEAKER.—Let us here what the hon'ble Minister has to say. I have heard your golden voice and let us hear the Minister's golden voice.

ಎ.ಳಿಗೆ ಪಿ,ಎಂ.

ಶ್ರೀ ಟಿ. ಎನ್. ನರಸಿಂಹಮೂರ್ತಿ (ನಗರಾಭಿವೃದ್ಧಿ ಸಚಿವರು).—ಮಾನ್ಯ ಸದಸ್ಯರು ಪ್ರಥಮವಾಗಿ ಸರ್ಕಾರದ ಮೇಲೆ ನೇರ ಆಪಾದನೆ ಮಾಡಿದರು. ಬಹುಶಃ ಅವರ ಪ್ರಶ್ನೆಗೆ ತಕ್ಕಂತೆ ನಾವು ಉತ್ತರ ಕೊಟ್ಟಿದ್ದೇವೆ ಅಲ್ಲಿ ಕುಡಿಯುವ ನೀರಿನ ಸರಬರಾಜು ನಿಂತಿಲ್ಲ, ಆದರೆ ಕಾಮಗಾರಿ ಕೆಲಸ ನಿಂತಿದೆ ಅಷ್ಟೆ. ಇದನ್ನು ಅರ್ಥ ಮಾಡಿಕೊಂಡರೆ ಸರ್ಕಾರವನ್ನು ದೂಷಿಸುವುಕ್ಕೆ ಸಾಧ್ಯವಿಲ್ಲ. ಕಳೆದ ೧೦ ವರ್ಷಗಳಿಂದ ಅಲ್ಲಿ ಕುಡಿಯುವ ನೀರಿಗೆ ತೊಂದರೆಯಾಗಿರುವುದು ನಮಗೆ ಗೊತ್ತಿದೆ. ಈ ಸಮಸ್ಯೆಯಲ್ಲ ಹಿಂದಿನ ಅಧ್ಯಾಯಕ್ಕೆ ಸೇರಿದ್ದೇ ಹೊರತು ನಮ್ಮ ಸರ್ಕಾರದ್ದಲ್ಲ. ಆದ್ದರಿಂದ ಈ ಅಧಿವೇಶನ ಮುಗಿದ ನಂತರ ಮಾನ್ಯ ಸದಸ್ಯರು ಮತ್ತು ಆ ಭಾಗದ ಲೋಕಸಭಾ ಸದಸ್ಯರ ಜೊತೆ ಸಮಾಲೋಚನೆ ನಡೆಸಿ ಪರಿಹಾರ ಕಂಡುಹಿಡಿಯುತ್ತೇನೆ. ಅಲ್ಲಿ ನಮಗೆ ನಾನಾ ತರಹದ ಸಮಸ್ಯೆಗಳು ಬಂದವು. ಗುತ್ತಿಗೆದಾರರು ಕೋರ್ಟಿಗೆ ಹೋದರು. ನಂತರ ಭೂಮಾಲೀಕರು ಅಡ್ಡಿ ಮಾಡಿದರು. ಪುರಸಭೆಯವರು ಅವರ ಪಾಲಿಗೆ ವಂತಿಗೆಯನ್ನು ನಮಗೆ ಕೊಡಲಿಲ್ಲ. ಹೀಗೆ ಅನೇಕ ಕಾರಣಗಳಿಂದ ತಡವಾಗಿದೆಯೇ ಹೊರತು ನೇರವಾಗಿ ಮಂಡಳಿಯಿಂದ ಆಗಲೀ, ಸರ್ಕಾರದಿಂದ ಆಗಲೀ ತಡವಾಗಿಲ್ಲ ಎಂಬ ಸ್ಪಷ್ಟೀಕರಣವನ್ನು ನೀಡುತ್ತಿದ್ದೇನೆ ಮಾನ್ಯ ಸದಸ್ಯರ ಕಳಕಳಿ ನನಗೆ ಅರ್ಥವಾಗಿದೆ. ಈ ಸಮಸ್ಯೆಯನ್ನು ಸರ್ಕಾರ ಜಾಗ್ರತೆ ಪರಿಹಾರ ಮಾಡುತ್ತೇವೆಂದು ಸ್ಪಷ್ಟವಾದ ಭಾಷೆಯಲ್ಲಿ ತಮ್ಮ ಮೂಲಕ ಸದಸ್ಯರಿಗೆ ತಿಳಿಸುತ್ತಿದ್ದೇನೆ.

ಶ್ರೀ ಸಿ. ಎಸ್. ನಾಡಗೌಡ ಅಪ್ಪಾಜಿ.—ಸ್ವಾಮಿ, ಟೆಂಡರ್ ನೋಟಿಫಿಕೇಷನಾದ ಮೇಲೂ ಕಂಟ್ರಾಕ್ಟರ್ ಕೆಲಸ ಮಾಡಿಲ್ಲ. The original contractor Mr. Patil has not taken up the work at all. Someone else is doing that job for him. Why he has not been black listed ? ಅವನು ಕೆಲಸ ಮಾಡದಿದ್ದಾಗ ಆತನ ಹೆಸರನ್ನು ಏತಕ್ಕೆ ಬ್ಲಾಕ್ ಲಿಸ್ಟ್ ಮಾಡಲಿಲ್ಲ ?

ಅಧ್ಯಕ್ಷರು.—ನಿಮ್ಮನ್ನು ಕರೆದು ಮಾತನಾಡುವುದಾಗಿ ಕಳಕಳಿಯಿಂದ ಸಚಿವರು ಹೇಳಿದ್ದಾರೆ.

ಶ್ರೀ ಸಿ. ಎಸ್. ನಾಡಗೌಡ ಅಪ್ಪಾಜಿ.—ಅಧ್ಯಕ್ಷರೇ, ಅಲ್ಲಿ ಕುಡಿಯುವ ನೀರಿನ ಸಮಸ್ಯೆ ಇಲ್ಲವೆಂದು ಉತ್ತರ ಕೊಟ್ಟಿದ್ದಾರೆ, ನಾಲ್ಕು ಮತ್ತು ಐದನೇ ವಾರ್ಡಿನಲ್ಲಿ ನಾಲ್ಕು ದಿವಸಕ್ಕೊಮ್ಮೆ ಕುಡಿಯುವ ನೀರು ಸಿಗುತ್ತದೆ, ಮುಂದ್ದೇಬಿಹಾಳ ತಾಲ್ಲೂಕಿನಲ್ಲಿ ಬೋರ್‌ವೆಲ್‌ನಲ್ಲಿ ಸಾಕಷ್ಟು ವಾಟರ್ ಟೇಬಲೇ ಇಲ್ಲ, ಅಲ್ಲಿ ಬೋರ್ ಎಷ್ಟು ಹಾಕಿದರೂ ನೀರು ಬೀಳುತ್ತಿಲ್ಲ. ಈಗ ಅಲ್ಲಿ ಎರಡು ಕೊಳವೆ ಬಾವಿ ಕೊರೆದಿದ್ದು ಅವುಗಳಿಗೆ ಹ್ಯಾಂಡ್ ಪಂಪುಗಳನ್ನು ಅಳವಡಿಸಲಾಗಿದೆ ಎಂದು ಹೇಳಿದ್ದೀರಿ. ಅಲ್ಲಿನ ೪೦ ಸಾವಿರ ಜನರಿಗೆ ಈ ಅರ್ಧ ಇಂಚ್ ಪೈಪ್‌ನಿಂದ ಬರುವ ನೀರು ಸಾಲುತ್ತದೆಯೇ ?

ಶ್ರೀ ಟಿ, ಎನ್. ನರಸಿಂಹಮೂರ್ತಿ.—ಹಾಲಿ ಸರಬರಾಜು ವ್ಯವಸ್ಥೆ ಏನಿದೆ ಅದನ್ನು ಸುಧಾರಿಸುವುದಕ್ಕೋಸ್ಕರವೇ ೨ ಕೋಟಿ ರೂ.ಗಳ ಒಂದು ಅಂದಾಜನ್ನು ತಯಾರಿಸಿದ್ದೇವೆ. ಅಲ್ಲಿ ಈಗಾಗಲೇ ೩೪ ಬೋರ್‌ವೆಲ್‌ಗಳಿವೆ. ಮತ್ತೆ ಎರಡು ಬೋರ್‌ವೆಲ್‌ಗಳನ್ನು ಕಳೆದ ವರ್ಷ ತೆಗೆಸಿದ್ದೇವೆ. ಅವು ಸಾಲದೆಂದು ನನಗೆ ಪತ್ರ ಬರೆಯುವುದಾದರೆ ಆದ್ಯತೆ ಮೇರೆಗೆ ಹೆಚ್ಚಿನ ಬೋರ್‌ವೆಲ್‌ಗಳನ್ನು ತೆಗೆಸಿ ಕೊಡುತ್ತೇನೆ. ಮತ್ತು ಅಲ್ಲಿನ ಕಾಮಗಾರಿಯನ್ನು ೯೧ನೇ ಇಸವಿಯೊಳಗೆ ಮುಗಿಸುತ್ತೇವೆ.

MR. SPEAKER.—This is a stop gap arrangement.

SRI C. S. NADA GOWDA APPAJI.—If it is a stop gap arrangement, borewell, 3-4 kms away from Muddebihal, has to be drilled. Most of the people are taking objection for that. This schme has to be completed within the stipulated time. ಅಲ್ಲಿ ತೋಟಗಾರಿಕೆ ಮಾಡುವ ಜನರು ಅಬ್ಜೆಕ್ಷನ್ ಮಾಡುತ್ತಿದ್ದಾರೆ. ಮೊದಲು ಸೆಪ್ಟೆಂಬರ್‌ನಲ್ಲಿ ಮುಗಿಸುವುದಾಗಿ ಹೇಳಿ ಈಗ ಮುಂದಿನ ವರ್ಷ ಜುಲೈಗೆ ಮುಗಿಸುತ್ತೇವೆಂದಿದ್ದಾರೆ. ಈಗ ಕೃಷ್ಣಾನದಿಯಲ್ಲಿ ಈಗ ಎರಡು ವಿಂಟರ್‌ನವರೆಗೆ ಹೊಳು ತುಂಬಿದೆ. ಹೊಸದಾಗಿ ನೀರು ಹರಿದು ಬಂದರೆ ನೀವು ತೆಗೆದ ಚಾನಲ್‌ಗಳು ಮುಚ್ಚಿ ಹೋಗುತ್ತವೆ, ಇದರಿಂದ ಮುಂದಿನ ವರ್ಷ ಮತ್ತೆ ಚಾನಲ್ ತೆಗೆಯುವುದೇ ಒಂದು ಕೆಲಸವಾಗುತ್ತದೆ, ಅಷ್ಟೆ, ಇದರಿಂದ ಈ ಕಾರ್ಯಕ್ರಮ ಮುಗಿಯುವುದೇ ಇಲ್ಲ.

T, N. NARASIMHA MURTHY.—I have carefully heard the Hon'ble member. The projectwill be completed according to the assurance that has given. I will stick to that.

ಶ್ರೀ ಮನೋಹರ ಐನಾಪುರ.—ಸನ್ಮಾನ್ಯ ಅಧ್ಯಕ್ಷರೇ, ಈಗ ನಮ್ಮ ಮಾನ್ಯ ಸದಸ್ಯರು ಈ ಮುದ್ದೇಬಿಹಾಳದ ಕೂಡಿಯುವ ನೀರಿನ ಬಗ್ಗೆ ಪ್ರಸ್ತಾಪ ಮಾಡಿ ಸವಿಸ್ತಾರವಾಗಿ ಹೇಳಿದರು. ಇನ್ನು ಮುಂದೆ ಈ ಸದನದಲ್ಲಿ ಇನ್ನೊಂದು ವಿಷಯ ಕೂಡಿಯುವ ನೀರಿನ ಬಗ್ಗೆ ಬರುತ್ತಿದೆ. ಅದು ಇಳಕಲ್ ಮತ್ತು ಹುನಗುಂದ್‌ಗೆ ಸಂಬಂಧಪಟ್ಟಿದ್ದು. ಈ ಬಿಜಾಪುರ ಜಿಲ್ಲೆಯನ್ನು ಸರ್ಕಾರ ಯಾವಾಗಲೂ ಏತಕ್ಕೆ ನೆಗ್ಲೆಕ್ಟ್ ಮಾಡುತ್ತಾರೆ ? ಏತಕ್ಕೆ ಈ ರೀತಿ ಡಿಲೇ ಮಾಡುತ್ತಾರೆ ? ಬಿಜಾಪುರ ನಗರದಲ್ಲಿ ಸುಮಾರು ಮೂರೂವರೆ ಲಕ್ಷ ಜನರು ಇದ್ದಾರೆ. ಅಲ್ಲಿ ಆರು ದಿವಸಕ್ಕೆ ಒಂದು ಸಲ ನೀರು ಬಿಡುತ್ತಾರೆ. ಅಲ್ಲಿಗೆ ಯಾವ ತರಹದ ಯೋಜನೆಯನ್ನು ಕೈಗೊಳ್ಳುತ್ತಿಲ್ಲ. ಅದೇರೀತಿ ಮುದ್ದೇಬಿಹಾಳ ಮತ್ತು ಅದೇ ರೀತಿ ಹುನಗುಂದ, ಇಳಕಲ್ ಪ್ರತಿಯೊಂದು ಟೌನಿನಲ್ಲಿಯೂ ಇದೇ ತೊಂದರೆಗಳು ಇದೆ. ಸರ್ಕಾರ ಇದರ ಬಗ್ಗೆ ಏತಕ್ಕೆ ಕ್ರಮ ತೆಗೆದುಕೊಳ್ಳುತ್ತಿಲ್ಲ ? ನಮ್ಮ ಬಿಜಾಪುರ ಜಿಲ್ಲೆಯನ್ನು ಏತಕ್ಕೆ ನೆಗ್ಲೆಕ್ಟ್ ಮಾಡುತ್ತೀರಾ ?

ಅಧ್ಯಕ್ಷರು.—ಮಾನ್ಯ ಮಂತ್ರಿಗಳೇ, ಏತಕ್ಕೆ ನೆಗ್ಲೆಕ್ಟ್ ಮಾಡುತ್ತೀರಿ ?

ಶ್ರೀ ಟಿ. ಎನ್. ನರಸಿಂಹಮೂರ್ತಿ.—ಬಿಜಾಪುರ ಜಿಲ್ಲೆಯಲ್ಲಿರತಕ್ಕಂಥ ಪಟ್ಟಣ ಪ್ರದೇಶಗಳಿಗೆ ನಾನು ಜವಾಬ್ದಾರನಾಗಿದ್ದೇನೆ. ಬಿಜಾಪುರ ಜಿಲ್ಲೆಯ ಪಟ್ಟಣ ಪ್ರದೇಶದ ಕೂಡಿಯಂಥ ನೀರಿನ ಆದ್ಯತೆಯ ಬಗ್ಗೆ ತಾವು ಏನು ಹೇಳುತ್ತಿದ್ದೀರಿ, ಅದನ್ನೆಲ್ಲಾ ನಾನು ಮಂತ್ರಿಯಾದ ಮೇಲೆ ಕೇಳಿಸಿಕೊಳ್ಳುತ್ತಿದ್ದೇನೆ. ಇನ್ನು ಮುಂದೆ ಈ ರೀತಿ ಈ ಸದನದಲ್ಲಿ ಮತ್ತೆ ಮತ್ತೆ ಈ ವಿಷಯವನ್ನು ಪ್ರಸ್ತಾಪ ಮಾಡುವುದಕ್ಕೆ ನಾನು ಅವಕಾಶವನ್ನು ಕೊಡುವುದಿಲ್ಲ ಎಂದು ನಾನು ನಿಮಗೆ ಭರವಸೆಯನ್ನು ಕೊಡುತ್ತೇನೆ.

ಅಧ್ಯಕ್ಷರು.—ಶ್ರೀ ರಾಮಸ್ವಾಮಿ—ಗೈರುಹಾಜರಿ
ಶ್ರೀ ಹಿಂಡಸಗೇರಿ – ಗೈರುಹಾಜರಿ

ಕೃಷಿ ಹಾಗೂ ತೋಟಗಾರಿಕೆ ಉತ್ಪಾದನೆಯಲ್ಲಿ ಉಂಟಾದ ನಷ್ಟದ ಬಗ್ಗೆ

೪೯೦ (೧೩೫೫) ಶ್ರೀ ಕೆ. ವಿ. ರವೀಂದ್ರನಾಥ ಬಾಬು (ಕೊಟ್ಟೂರು).—ಮಾನ್ಯ ಕೃಷಿ ಮತ್ತು ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೇ :—

ಅ) ಉತ್ಪನ್ನ ಮಟ್ಟದಿಂದ ಮಾರುಕಟ್ಟೆ ಮಟ್ಟದವರೆಗೆ ಕೃಷಿ ಮತ್ತು ತೋಟಗಾರಿಕೆ ಉತ್ಪನ್ನಗಳ ಶೇಕಡವಾರು ಹಾಳಾಗುವ ಪ್ರಮಾಣವೆಷ್ಟು ?

ಆ) ಸದರಿ ನಷ್ಟವನ್ನು ಕಡಿಮೆ ಮಾಡಲು ಸರ್ಕಾರವು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಎಸ್. ಬಂಗಾರಪ್ಪ (ಕೃಷಿ ಮತ್ತು ತೋಟಗಾರಿಕೆ ಮಂತ್ರಿಗಳು).—

ಅ) ಆಹಾರ ಧಾನ್ಯಗಳು ಮತ್ತು ಎಣ್ಣೆ ಕಾಳುಗಳಲ್ಲಿ ಕಟಾವಿನ ನಂತರದ ಒಟ್ಟು ನಷ್ಟದ ಪ್ರಮಾಣ ಶೇಕಡಾ ೯.೫% ಎಂದು ಅಂದಾಜು ಮಾಡಲಾಗಿದೆ. ಮತ್ತು ತೋಟಗಾರಿಕೆ ಉತ್ಪನ್ನಗಳಲ್ಲಿ ಶೇಕಡಾ ೨೦ ರಿಂದ ೨೫% ಎಂದು ಅಂದಾಜು ಮಾಡಲಾಗಿದೆ. ಕೃಷಿ ಇಲಾಖೆಯು ಇತರೆ ಕೃಷಿ ಬೆಳೆಗಳಾದ ಹತ್ತಿ, ಕಬ್ಬು ಇತರ ಬೆಳೆಗಳ ನಷ್ಟದ ಪ್ರಮಾಣವನ್ನು ಅಂದಾಜು ಮಾಡಿರುವುದಿಲ್ಲ.

ಆ) ಕೃಷಿ ಇಲಾಖೆಯು ಕಟಾವಿನ ನಂತರವಲ್ಲಿ ಆಹಾರ ಧಾನ್ಯಗಳು ಮತ್ತು ಎಣ್ಣೆ ಕಾಳುಗಳಲ್ಲಿ ನಷ್ಟವಾಗುವುದನ್ನು ತಪ್ಪಿಸುವ ವಿಧಾನಗಳ ಬಗ್ಗೆ ರೈತರಿಗೆ ಶಿಕ್ಷಣ ನೀಡುತ್ತಿದೆ. ಹಾಗೂ ಉಗ್ರಾಣ ಕೀಟನಾಶಕಗಳು ಮತ್ತು ಧಾನ್ಯ ಸಂಗ್ರಹಣ ಕಣಜಗಳನ್ನು ರಿಯಾಯ್ತಿ ದರದಲ್ಲಿ ರೈತರಿಗೆ ಒದಗಿಸುತ್ತಿದೆ.

ಸರ್ಕಾರವು ಹಣ್ಣು ಮತ್ತು ತರಕಾರಿ ಕೊಯ್ಲು ನಂತರದ ನಷ್ಟವನ್ನು ಕಡಿಮೆ ಮಾಡಲು ಈ ಕೆಳಕಂಡ ಕ್ರಮಗಳನ್ನು ತೆಗೆದುಕೊಂಡಿದೆ.